ಮೇಲೆ ಹಾಕಿದ್ದ ಹೂವುಗಳು ಯಾವ ಊರ ಹಿರಿಯನ ಸಂಸ್ಕಾರಕ್ಕೂ ಕಡಿಮೆಯಿಲ್ಲದಂತೆ, ಅದು ಇನ್ನೊಂದು ದೇವಸ್ಥಾನ ಮತ್ತು ಮಠದ ಉದಯಕ್ಕೆ ಮುನ್ನುಡಿ ಎನ್ನುವಂತೆ ಇತ್ತು. ಕೆಲವೇ ವಾರಗಳಲ್ಲಿ ಊರವರೆಲ್ಲರ ಕಾಣಿಕೆಯೊಂದಿಗೆ ಅಲ್ಲಿ ಒಂದು ಸಣ್ಣ ಗರ್ಭಗುಡಿ ನಿರ್ಮಾಣವಾಯಿತು. ಉಳಿದದ್ದನ್ನು ವಂತಿಕೆ ಎತ್ತಿ ಕಟ್ಟುವುದೆಂದು ನಿರ್ಧಾರವಾಯಿತು.

ನನಗೆ ಒಂದು ಕ್ಷಣ ಆಶ್ಚರ್ಯವಾಯಿತು. ಎಲ್ಲವೂ ಆಗುತ್ತಿರುವುದು ನನ್ನಿಂದಲೇ, ನನ್ನ ಪ್ರಭಾವದಿಂದಲೇ. ಆದರೆ ಯಾರೂ ನನ್ನನ್ನೇ ಗುರುತಿಸುತ್ತಿಲ್ಲವಲ್ಲ ಎಂಬ ಸಣ್ಣ ಅಸೂಯೆಯೂ ಆಯಿತು. ಪಕ್ಕದಲ್ಲಿ ಕುಳ್ಳಗೆ ನಿಂತಿದ್ದ ಅರ್ಧಾಂಗಿ ಕಿಸಕ್ಕನೆ ನಕ್ಕಳು. ನನಗೆ ಮಯನ ಅರಮನೆಯಲ್ಲಿ ದ್ರೌಪದಿ ನಕ್ಕದ್ದರಿಂದ ಸುಯೋಧನನಿಗೆ ಆದಂಥ ಅವಮಾನವಾಯಿತು. ಇನ್ನೂ ವಾಸ್ತವ್ಯವನ್ನು ಬದಲಾಯಿಸಿರದ ಮಂಜುನಾಥಾನಂದ ಸ್ವಾಮೀಜಿಗಳ ಮನದಲ್ಲಿ ಬುದ್ಧನಿಗಾದಂಥ ಜ್ಞಾನೋದಯವಾಗಿಸುವ ಬದಲು ಸುಮ್ಮನಿರುವುದೆಂದು ನಿರ್ಧರಿಸಿಕೊಂಡೆ. ಸಾಧ್ಯವಾದರೆ ಒಳ್ಳೆಯದನ್ನು ಮಾಡಿ ಮಾತ್ರ ರೂಢಿಯಿದ್ದ ನನಗೆ ಯಾರಿಗೂ ಕೆಟ್ಟದ್ದನ್ನು ಮಾಡಿ ಗೊತ್ತಿರಲಿಲ್ಲ. ಅದಕ್ಕೆ ನಿರ್ಲಿಪ್ತನಾಗಿರುವುದೇ ಸೂಕ್ತವೆಂದು ಸುಮ್ಮನಾದೆ. ಆದರೆ ನನ್ನ ಹೆಂಡತಿ ಬಿಡಬೇಕಲ್ಲ. ನೀವು ಬಾಯಿ ಮುಚ್ಚಿಕೊಂಡು ಸುಮ್ಮನಿರಿ, ಎಲ್ಲವನ್ನೂ ಇನ್ನುಮುಂದೆ ನಾನು ನೋಡಿಕೊಳ್ಳುತ್ತೇನೆ ಎಂದಂತಾಯಿತು. ನನ್ನ ಎತ್ತರದ ತಲೆಯನ್ನು ಕೆಳಕ್ಕೆ ವಾಲಿಸಿ ಆಕೆಯ ಮುಖವನ್ನು ಇಣುಕಿ ನೋಡಿದೆ. ಆಕೆ ಮೇಲಕ್ಕೆ ತಲೆಯೆತ್ತಿದವಳು ಮುಗುಳ್ನಕ್ಕಳು. ಆ ನಗುವಿನಲ್ಲಿ ವ್ಯಂಗ್ಯವಿತ್ತೋ, ಹಾಸ್ಯವಿತ್ತೋ, ಅಪಹಾಸ್ಯವಿತ್ತೋ ತಿಳಿಯಲಿಲ್ಲ. ಸ್ವಾಮೀಜಿಗಳ ಮನದಲ್ಲಿ ಸಾಯುವ ಬದಲು ಬದುಕುವ ಆಸೆಯನ್ನೂ, ನಿರ್ಲಿಪ್ತತೆಯ ಬದಲು ವಾಂಛೆಯನ್ನೂ ಚಿಗುರಿಸಿದಳು.

ಲಕ್ಷ ರೂಪಾಯಿ ಸಂಬಳ ಬರುತ್ತಿದ್ದ ಕೆಲಸವನ್ನು ಬಿಟ್ಟು ಸ್ವಾಮೀಜಿಯಾಗಿರುವ ಬಗ್ಗೆ ಊರಿಗೆ ಊರೇ ಏನು, ಸುತ್ತಮುತ್ತಲ ಚಪ್ಪನ್ನಾರು ಹಳ್ಳಿಗಳಿಗೂ ಕ್ಷಣಾರ್ಧದಲ್ಲಿ ಪ್ರಚಾರವಾಯಿತು. ಕೆಲವರು ಸ್ವಾಮೀಜಿಯಾಗುವುದರಲ್ಲಿ ಅಷ್ಟೊಂದು ಲಾಭವಿದೆಯೇ ಎಂದರು. ಪಿಂಜಾರರ ರಾಜಾಸಾಬಿ ಸತ್ಯಾನಂದ ಸ್ವಾಮೀಜಿಗಳ ಉದಾಹರಣೆ ನೀಡಿ, 'ನೆನ್ನೆ ಮೊನ್ನೆ ಬಚ್ಚಾ ಆಗಿದ್ದ ಸ್ವಾಮೀಜಿ, ಹೆಂಗೆ ಅಚ್ಛಾ ಆದ ನೋಡು...' ಎಂದು ತನ್ನದೂ ಒಂದು ಅಭಿಪ್ರಾಯ ಸೇರಿಸಿದ.

ಇಲ್ಲಿ ಇಂಥದೊಂದು ಮಠ ಆಗುತ್ತಿರುವುದನ್ನು ದೂರದಿಂದಲೇ ಲೆಕ್ಕಾಚಾರ ಮಾಡಿಕೊಂಡು ಕುಳಿತಿದ್ದ ದುರ್ಗದ ಮಠದ ಸ್ವಾಮೀಜಿಗಳು, 'ಮಠ ಕಟ್ಟುವುದೆಂದರೆ ಅಷ್ಟು ಸುಲಭವೇ... ಅವರಿಗಿನ್ನೂ ಅನುಭವವಿಲ್ಲ. ಒಂದು ಹಂತಕ್ಕೆ ಬಂದು ನಿಲ್ಲುತ್ತಲ್ಲ, ಆಗ ಗೊತ್ತಾಗುತ್ತೆ. ಯಾವಾಗ ಹಣಕ್ಕೆ ಕೊರತೆ ಉಂಟಾಗುತ್ತದೆಯೋ ಆಗ ಅವರೇ ಹುಡುಕಿಕೊಂಡು ಬರುತ್ತಾರೆ. ಬರಲಿ. ಅವಾಗ ನಮ್ಮ ಮಠದ ಉಪಕೇಂದ್ರ ಮಾಡಿಕೊಂಡರಾಯಿತು...' ಎಂದುಕೊಂಡು ಅಲ್ಲಿಂದ ಐದು ಕಿಲೋಮೀಟರ್ ದೂರದಲ್ಲಿರುವ ಗುಡ್ಡವನ್ನು ಆ ಮಠದ ಪರವಾಗಿ ತಮ್ಮ ಮಠದ ಹೆಸರಲ್ಲೇ, 'ಸರ್ಕಾರೀ ಭೂಮಿಯನ್ನು ಅಲಾಟ್‌ಮೆಂಟ್ ಮಾಡಿಕೊಡಬೇಕು' ಎಂದು ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿದರು.

ಮಂಜುನಾಥಾನಂದ ಸ್ವಾಮೀಜಿಗಳು ಯಾವ ಜನಾಂಗದವರು ಎಂದು ಪಕ್ಕದಲ್ಲಿದ್ದ ಆಡಳಿತಾಧಿಕಾರಿಯ ಕಿವಿಯಲ್ಲಿ ಕೇಳಿ ತಿಳಿದುಕೊಂಡವರು, 'ಆ ಜನರೂ ನಮ್ಮ ಮಠದ ಭಕ್ತರೇ ಅಲ್ಲವೇ, ಆ ಜಾತಿಯದೊಂದು ಮಠವಾದಂತಾಯಿತು ಬಿಡಿ...' ಎಂದು ವಿಹಂಗಮ ನಗೆ ನಕ್ಕರು.

ಕೊಂಬೆ–11

ಕಾಳಿಂಗನ ವಂಶದ ಒಬ್ಬಾತ ಸಿನಿಮಾ ನಟ ಇದ್ದಾನೆಂದು ಹೇಳಿದ್ದೆನಲ್ಲ. ಆತನ ಹೆಸರು ಅಮೋಘವರ್ಷ ನೃಪತುಂಗ ಅಂತ. ಕನ್ನಡ ಸಿನಿಮಾರಂಗದಲ್ಲಿ ರಾಜಕುಮಾರ, ಅಂಬರೀಶ, ವಿಷ್ಣುವರ್ಧನ ಅಂತ ಹೆಸರಿಟ್ಟುಕೊಂಡ ಮೇಲೆ ಈತನೂ ಮಹಾರಾಜನೊಬ್ಬನ ಹೆಸರಿಟ್ಟುಕೊಳ್ಳಬೇಕೆಂದು ನೃಪತುಂಗ ಅಂತ ಹೆಸರಿಟ್ಟುಕೊಂಡ. ಆತನ ಅಪ್ಪ ಯಮುನಪ್ಪ ದೊಡ್ಡ ಸಾಹಿತಿಯಾದ್ದರಿಂದ ಕವಿರಾಜಮಾರ್ಗದಂಥ ಮಹಾನ್ ಕೃತಿಯನ್ನು ಬರೆದ ಅಥವ ಬರೆಸಿದ ಕುರುಹಾಗಿ ತನ್ನ ಮಗನಿಗೆ ಅಮೋಘವರ್ಷ ನೃಪತುಂಗ ಎಂಬ ಉದ್ದದ ಹೆಸರನ್ನು ಇಟ್ಟಿದ್ದ. ಸಿನಿಮಾಗೆ ಸೇರಿದ ಮೇಲೆ ಅಮೋಘವರ್ಷ ಎಂಬುದು ಬಹಳ ಜನರಿಗೆ ನೆನಪಿಟ್ಟುಕೊಂಡು ಹೇಳಲು ಕಷ್ಟವಾಗಬಹುದಾದ್ದರಿಂದ ಉಳಿದರ್ಧವನ್ನು ಮಾತ್ರ ಉಳಿಸಿಕೊಂಡಿದ್ದ. ಎಂಬತ್ತುತೊಂಬತ್ತರ ದಶಕದಲ್ಲಿ ಸಾಗರದ ಹತ್ತಿರದ ನೀಲಕಂಠೇಶ್ವರ ನಾಟಕ ಸಂಘಕ್ಕೆ ಹೋಗಿ ತರಬೇತಿ ಪಡೆದುಬಂದಿದ್ದ.

ಯಾವಾಗ ರಂಗಭೂಮಿಯಲ್ಲಿ ನಟನೆ ಮಾಡಿದ್ದನೋ ಆಗ ಸಿನಿಮಾದಲ್ಲಿ ನಟನೆ ಮಾಡುವುದು ಸುಲಭವಾಗಿತ್ತು. ಬೇರೆಯವರಿಗಿಂತಲೂ ರಂಗಭೂಮಿಯ ಹಿನ್ನೆಲೆಯಿಂದ ಬಂದವರಿಗೆ ಆತ್ಮವಿಶ್ವಾಸ ಜಾಸ್ತಿ. ಆ ಆತ್ಮಸ್ಥೈರ್ಯವೇ ಅವನನ್ನು ಮೇಲಕ್ಕೊಯ್ದಿತ್ತು. ಬರೀ ನಟನೆಯಷ್ಟೇ ಅಲ್ಲ, ಆತನ ಆರಡಿ ಎತ್ತರದ ನಿಲುವು, ಉದ್ದನೆಯ ನೀಳ ನಾಸಿಕ, ಮುಖದ ಮೇಲಿನ ಮುದ್ದು ಬರುವಂಥ ಮುಗುಳುನಗೆ ಆತನ ವ್ಯಕ್ತಿತ್ವಕ್ಕೆ ಒಂದು ಕಳೆಯನ್ನು ತಂದುಕೊಟ್ಟಿತ್ತು. ಆತ ನಟನೆ ಮಾಡುವುದೇ ಬೇಡ, ಸುಮ್ಮನೆ ನಡೆದರೂ ಸಾಕು, ಇಲ್ಲ ಕುಂತರೂ ಸಾಕು, ಹಾಗೇ ನಿಂತರೂ ಸರಿಯೇ, ಅದೇ ನಟನೆಗಿಂತಲೂ ಅದ್ಭುತವಾಗಿ ಮೂಡಿಬರುತ್ತದೆಂದು ಛಾಯಾಗ್ರಾಹಕ ರಾಮಕೃಷ್ಣ ಪದೇಪದೇ ಹೇಳುತ್ತಿದ್ದ. 'ನನಗೆ ಅದೇನೂ ಗೊತ್ತಾಗುವುದಿಲ್ಲಪ್ಪ, ನೀವು ಹೇಗೆ ಹೇಳುತ್ತೀರೋ ಹಾಗೆ ಮಾಡುತ್ತೇನಷ್ಟೇ... ಅದನ್ನು ನೀವು ನಟನೆ ಅಂತ, ಕಲೆ ಅಂತ, ದೈವದತ್ತ ವರ ಅಂತ ಇನ್ನೂ ಏನೇನೋ ಹೆಸರು ಕಟ್ಟಿ ಕರೀತೀರಾ... ನನ್ನಿಂದ ಇಂತಿಂಥ ಪಾತ್ರ ಮಾಡಿಸಿದರೆ ಹೇಗೆ ಎಂದು ನಿರ್ಧರಿಸುತ್ತೀರಾ... ನೀವೇ ನನ್ನನ್ನು ನೋಡಿ ಖುಷಿಪಡುತ್ತೀರಾ... ಹಾಗೆ ಖುಷಿಪಡುವುದಕ್ಕೆಂದು ಬಂದು ಟಿಕೆಟ್‌ಗೆ ದುಡ್ಡು ಕೊಡುತ್ತೀರಾ... ಅದರಲ್ಲಿ ನಿರ್ಮಾಪಕರು ನನಗೊಂದಿಷ್ಟು ಹಣ ಕೊಡುತ್ತಾರೆ ಅಷ್ಟೇ... ಇದರಲ್ಲಿ ನನ್ನ ಹೆಚ್ಚುಗಾರಿಕೆಯೇನೂ ಇಲ್ಲ...' ಎಂದು ಹೇಳುತ್ತಿದ್ದರೆ ಎಲ್ಲರೂ ಮೂಗಿನ ಮೇಲೆ ಬೆರಳು ಇಟ್ಟು ಆಸ್ವಾದಿಸುತ್ತಿದ್ದರು. ನಿಮ್ಮ ಸೌಜನ್ಯದ ಮಾತೇ ನಿಮ್ಮ ನಟನೆಗಿಂತಲೂ ಖುಷಿ ಕೊಡುತ್ತದೆ ಎಂದೂ ಒಂದಷ್ಟು ಜನ ಹೇಳಿದ್ದಾರೆ. ಆದರೂ 'ಏನೋಪ್ಪ, ಯಾವ ದೇವರ ಆಶೀರ್ವಾದವೋ ಗೊತ್ತಿಲ್ಲ. ನೀವು ಹೇಗೆ ಸಂಭ್ರಮ ಪಡುತ್ತೀರೋ, ಅದಕ್ಕೆ ನಾನು ಹೇಗೆ ಮಾಡಬೇಕು ಅಂತ ಹೇಳುತ್ತೀರೋ ಹಾಗೆ ಮಾಡುತ್ತೇನಷ್ಟೇ...' ಎಂದು ವಿನೀತನಾಗಿ ಕೈಮುಗಿಯುತ್ತಾನೆ. ಬೇರೆ ನಟರು ಎಲ್ಲ ತನ್ನಿಂದಲೇ, ತಾನು ಮನಸ್ಸು ಮಾಡಿದರೆ ಉಂಟು, ಇಲ್ಲದಿದ್ದರೆ ಇಲ್ಲ ಎಂಬ ಅಹಂನಿಂದ ತುಂಬಿ ತುಳುಕಾಡುತ್ತಿದ್ದರೆ, ಕಡಿಮೆ ಸಂಭಾವನೆ ಕೊಟ್ಟರೂ ಯಾಕೆ ಇಷ್ಟು ಕೊಟ್ಟಿರಿ ಎಂದೂ ಕೇಳದ ನೃಪತುಂಗನೇ ನಿರ್ಮಾಪಕರಿಗೂ ಅಚ್ಚುಮೆಚ್ಚು... ಯಾವುದಾದರೂ ಸಿನಿಮಾ ನಿರೀಕ್ಷಿಸಿದಷ್ಟು ಲಾಭ ಮಾಡಿಕೊಳ್ಳಲಿಲ್ಲವೆಂದು ನಿರ್ಮಾಪಕ ಏನಾದರೂ ಗೊಣಗರಿದನೆಂದರೆ ಆತನಿಗೆ ಇನ್ನೊಂದು ಸಿನೆಮಾಕ್ಕೆ ಕಾಲ್‌ಶೀಟ್ ಕೊಟ್ಟುಬಿಡುವಂಥ ಸೌಜನ್ಯವಂತ. ಆ ನಿಮ್ಮ ಗುಣವೇ ನಿಮ್ಮ ನಟನೆಗೊಂದು ಮೆರುಗು ಎಂದು ಅನೇಕ ಪತ್ರಕರ್ತರು ಹೇಳುತ್ತಿದ್ದುದು ಮುಖಸ್ತುತಿಗಲ್ಲ ಎಂಬುದು ಆತನಿಗೂ ಗೊತ್ತಿದೆ.

ಎಷ್ಟೇ ಆಗಲಿ. ನನ್ನ ನೆರಳಲ್ಲಿ ಆಡಿ ಬೆಳೆದ ಹುಡುಗ ಆತ. ಇಲ್ಲೇ ಪಕ್ಕದ ಸ್ಕೂಲಿನಲ್ಲಿ ಆತ ಓದಿದ್ದು. ಬಿಡುವಿನ ವೇಳೆಯಲ್ಲಿ ಸಮವಯಸ್ಸಿನ ಹುಡುಗರ ಜೊತೆ ಬಂದು ಗೋಲಿ, ಗಜ್ಜುಗ, ಬುಗುರಿ, ಚಿನ್ನಿದಾಂಡು ಆಡುತ್ತಿದ್ದಂಥ ಹುಡುಗ. ಅವನಿಗೆ ಕಬಡ್ಡಿ, ಕೊಕ್ಕೋ, ಕ್ರಿಕೆಟ್ಟು ಅಂದರೂ ಇಷ್ಟ. ಆದರೆ ಅಪ್ಪನಂತೆಯೇ ಓದಿನಲ್ಲಿಯೂ ಅಪಾರ ಆಸಕ್ತಿ. ಅಂಥ ಹುಡುಗ ಬೆಂಗಳೂರಿನಲ್ಲಿ ಯಾವುದೋ ಕಂಪನಿಯ ಉದ್ಯೋಗಕ್ಕೆಂದು ಹೋಗಿದ್ದಾತ, ತನ್ನ ಅಪ್ಪನ ಗೆಳೆಯರಾದ ವೀರಭದ್ರಪ್ಪನವರ ಜತೆ 'ಬಂಗಾರದ ಮನುಷ್ಯ' ಸಿನಿಮಾದ ಡೈರೆಕ್ಟರ್ ಸಿದ್ದಲಿಂಗಯ್ಯನವರ ಕಣ್ಣಿಗೆ ಬಿದ್ದ. ಆತನ ಆಳ್ತನವನ್ನು ಕಂಡು ತಮ್ಮ ಕೊನೇ ಸಿನೆಮಾಕ್ಕೆ ಹೀರೋ ಆಗುವಿಯಂತೆ ಬಾ ಎಂದು ಕರೆದಿದ್ದರು.

ಆದರೆ ಈಗ ಸಿಕ್ಕಿರುವ ಸಣ್ಣದೋ ಪುಟ್ಟದೋ ಉದ್ಯೋಗ, ಅದನ್ನು ಬಿಟ್ಟರೆ ಸಿನೆಮಾ ನೆಚ್ಚಿಕೊಂಡು ಜೀವನ ಮಾಡಲು ಸಾಧ್ಯವೇ ಎಂದು ನಿರಾಕರಿಸಿಬಿಟ್ಟ. ವೀರಭದ್ರಪ್ಪ ಸಹ, 'ಅದೇನು ಪುಟಗೋಸಿ ಕೆಲಸ, ಬಿಟ್ಟು ಹೋಗಪ್ಪ ಅತ್ಲಾಗೆ...' ಅಂದರೂ, 'ಸಾರ್, ನನಗೆ ಆ್ಯಕ್ಟಿಂಗ್ ಬರಲ್ಲ...' ಎಂದು ತನ್ನ ಅಳುಕಿನ ಸೀಕ್ರೆಟ್ ಹೇಳಿದ್ದ. ಆದರೆ ಅವರು 'ಯಾರಿಗೆ ಬರುತ್ತಪ್ಪ ನಿಜವಾದ ಆ್ಯಕ್ಟಿಂಗು?...' ಎಂದಂದು ಭರವಸೆ ಮೂಡಿಸಿದ್ದರು.

(ಸಶೇಷ)